


ಒಮ್ಮೆ ಗುಂಡ ದೇವರನ್ನು ಪ್ರಾರ್ಥಿಸುತ್ತಾ ಕೇಳಿಕೊಂಡ, 'ಓ ದೇವರೇ, ನನ್ನ ಹುಡುಗಿ ಪ್ರತಿನಿತ್ಯ ಸಾಯುವ ಆ ಗುಲಾಬಿ ಹೂವನ್ನೇಕೆ ಪ್ರೀತಿಸುತ್ತಾಳೆ ಮತ್ತು ಅವಳಿಗಾಗಿ ಪ್ರತಿನಿತ್ಯ ಸಾಯುವ ನನ್ನನ್ನೇಕೆ ಪ್ರೀತಿಸುತ್ತಿಲ್ಲ?'

ಸ್ವಲ್ಪ ಸಮಯ ಯೋಚಿಸಿದ ಬಳಿಕ ದೇವರು ಉತ್ತರಿಸಿದರು, 'ವತ್ಸಾ, ತುಂಬಾ ಚೆನ್ನಾಗಿದೆ, ಫೇಸ್ ಬುಕ್‌ನಲ್ಲಿ ಹಾಕು, ಅಲ್ಲಿ ನಿನಗೆ ಸಾಕಷ್ಟು ಉತ್ತರಗಳ ಜೊತೆ ಲೈಕುಗಳೂ ಸಿಗುತ್ತವೆ!'

ಪತ್ನಿಯನ್ನು ವಶದಲ್ಲಿರಿಸಿಕೊಳ್ಳಲು ಗುಂಡ ಸ್ವಾಮೀಜಿಯ ಬಳಿ ತಾಯಿತ ಕಟ್ಟಿಸಿಕೊಂಡ.

ಒಂದು ತಿಂಗಳ ಬಳಿಕ ಸ್ವಾಮೀಜಿಯ ಬಳಿ ಮರಳಿ ಗುಂಡ ಹೇಳಿದ, 'ಗುರುಗಳೇ, ನನ್ನ ಪತ್ನಿಯ ಮೇಲೆ ನಿಮ್ಮ ತಾಯಿತ ಯಾವುದೇ ಪರಿಣಾಮ ಬೀರಲಿಲ್ಲ ಆದರೆ ಪಕ್ಕದ ಮನೆಯಾಕೆ ವಶವಾದಳು'!

'ಪರಿಣಾಮವಾಗಲಿಲ್ಲ ಅನ್ನುವುದೇನೋ ಸರಿ, ಆದರೆ ಪಾರ್ಶ್ವ ಪರಿಣಾಮವಾದರೂ ಆಯಿತು ತಾನೆ?' ಎನ್ನುತ್ತಾ ಸ್ವಾಮೀಜಿ ಮುಗುಳ್ನಕ್ಕರು!

***

ಕುಡುಕ ಗುಂಡ ಬೀಡಿಗೆ ಬೆಂಕಿ ಹಚ್ಚದೆಯೇ ಸೇದುತ್ತಿದ್ದ.

ಜೊತೆಗಿದ್ದ ಗೆಳೆಯ ಪುಂಡ ವಿಚಾರಿಸಿದ, 'ಏನಯ್ಯಾ, ನಿನ್ನ ಬೀಡಿಯಲ್ಲಿ ಹೊಗೆಯೇ ಬರುತ್ತಿಲ್ಲ?'

'ಅದು ಸಿಎನ್‌ಜಿ ಬೀಡಿ ಕಣಯ್ಯಾ' ಮತ್ತಿನಲ್ಲಿದ್ದ ಗುಂಡ ತಕ್ಷಣ ಸ್ಪಷ್ಟೀಕರಿಸಿದ.

***

ಕೊರೊನಾ ರಜಾಕಾಲದ ವಿಶೇಷ ಕಾರ್ಯ ಸಂಬಂಧಿ ಮನವಿ

ಮಾನ್ಯರೇ,

ಮನೆಯಲ್ಲಿ ನಾನು ನನ್ನ ಹೆಂಡತಿಯ ಕಾರಣದಿಂದ ನರಳುತ್ತಿದ್ದೇನೆ ದಯವಿಟ್ಟು ತಾವು ಮುತುವರ್ಜಿ ವಹಿಸಿ ನನಗೆ ಎರಡು ದಿನದ 'ವರ್ಕ್ ಫ್ರಮ್ ಆಫೀಸ್' ಕಾರ್ಯಪದ್ಧತಿಯನ್ನು ದಯಪಾಲಿಸಬೇಕಾಗಿ ವಿನಂತಿ!

***

ಗುಂಡ: ಲಾಕಪ್ ಮತ್ತು ಲಾಕ್ ಡೌನ್ ಗಿರುವ ವ್ಯತ್ಯಾಸ ಮತ್ತು ಸಾಮ್ಯತೆಗಳೇನು ಗೊತ್ತೆ?

ಪುಂಡ: ನಂಗೊತ್ತಿಲ್ಲ ಕಣಯ್ಯಾ, ನೀನೇ ಹೇಳು.

ಗುಂಡ: ಲಾಕಪ್ ನಲ್ಲಿ ನಾವು ಒಳಗೆ ಹೋದಾಗ ಏಟು ಕೊಡುತ್ತಾರೆ ಮತ್ತು ಲಾಕ್ ಡೌನ್ ನಲ್ಲಿ ನಾವು ಹೊರಗೆ ಹೊರಟಾಗ ಏಟು ಕೊಡುತ್ತಾರೆ. ಇದು ವ್ಯತ್ಯಾಸ.

ಎರಡರಲ್ಲೂ ಪೊಲೀಸರು ಮಹತ್ವಪೂರ್ಣ ಭೂಮಿಕೆ ನಿಭಾಯಿಸುವುದೇ ಸಾಮ್ಯತೆ.

***

ತನ್ನ ಮದುವೆಯ ಒಂದು ದಿನ ಮೊದಲು ಗುಂಡನಿಗೆ ಭಾವೀ ಹೆಂಡತಿಯಿಂದ ಮೆಸೇಜ್ ಬಂತು, 'ಸಾರಿ, ನಮ್ಮ ಮದುವೆ ಸಾಧ್ಯವಿಲ್ಲ, ಬೇರೆ ಕಡೆ ಆಗುತ್ತಿದೆ'.

ಇದನ್ನೋದಿ ಗುಂಡ ಮಾನಸಿಕ ಒತ್ತಡಕ್ಕೊಳಗಾದ.

ತುಸು ವೇಳೆಯ ಬಳಿಕ ಆಕೆಯಿಂದ ಪುನಃ ಮೆಸೇಜ್ ಬಂತು, 'ಸಾರಿ ರೀ... ತಪ್ಪಾಗಿ ನಿಮಗೆ ಸೆಂಡ್ ಆಯಿತು'. ಈಗಂತೂ ಗುಂಡ ಖಿನ್ನತೆಗೇ ಒಳಗಾದ!

***

ಡಾಕ್ಟರ್ ಗುಂಡಣ್ಣನವರ ಪ್ರಕಾರ, ಕೋವಿಡ್ ಪರಿಣಾಮಕ್ಕೆ ಒಳಗಾದ ಪಂಚೇಂದ್ರಿಯಗಳ ಶೇಖಡವಾರು ವರ್ಗೀಕರಣ ಇಂತಿದೆ...

★ ವಾಸನೆಯ ಸೆನ್ಸ್ 0.5%
★ ರುಚಿಯಯ ಸೆನ್ಸ್ 0.5%
★ ಕಾಮನ್ ಸೆನ್ಸ್ 99%

***

ಸ್ವಾಮೀಜಿ: ನಿನಗೆ ಜೀವನದಲ್ಲಿ ಏನು ಬೇಕು?

ಗುಂಡ: ಹಣ..

ಸ್ವಾಮೀಜಿ: ಹಣವನ್ನು ಬದಿಗಿಟ್ಟು ಇನ್ನೊಮ್ಮೆ ಹೇಳು, ನಿನಗೆ ಜೀವನದಲ್ಲಿ ಏನು ಬೇಕು?

ಗುಂಡ: ಬದಿಗಿಟ್ಟ ಆ ಹಣ...

***

ಫೆಡರರ್: ಟೆನಿಸ್ ಬಾಲ್ ಮತ್ತು ಟೆನಿಸ್ ರಾಕೆಟ್ ಖರೀದಿಯಲ್ಲಿ ನಿಮ್ಮ ದೇಶವು ಪ್ರಪಂಚದಲ್ಲೇ ಮೊದಲ ಸ್ಥಾನದಲ್ಲಿದೆ.

ಸಚಿನ್: ಹೌದು, ನಾವು ಟೆನಿಸನ್ನು ಪ್ರೀತಿಸುತ್ತೇವೆ. ಆದರೆ ಕ್ರಿಕೆಟ್ ನಮ್ಮ ಪಂಚಪ್ರಾಣ.

ಫೆಡರರ್: ನೀವು ಟೆನಿಸ್ ಬಾಲ್ ನೊಂದಿಗೆ ಕ್ರಿಕೆಟ್ ಆಡುವಿರೆಂದು ಕೇಳಿದ್ದೆ, ನಿಜವೇ?

ಸಚಿನ್: ನಿಜ.

ಫೆಡರರ್: ಹಾಗಾದರೆ ಟೆನಿಸ್ ರಾಕೆಟ್ ನೊಂದಿಗೆ ಏನು ಮಾಡುತ್ತೀರಿ?

ಸಚಿನ್: ಅವುಗಳಿಗೆ ಬ್ಯಾಟರಿ ಜೋಡಿಸಿ ಸೊಳ್ಳೆ ಹೊಡೆಯಲು ಉಪಯೋಗಿಸುತ್ತೇವೆ!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ.

ತಿಮ್ಮ : ( ಜೈಲಿನಲ್ಲಿ ) ನಿನ್ನನ್ನು ಯಾಕೆ ಅರೆಸ್ಟ್ ಮಾಡಿದ್ರು ?

ರಂಗ : ಜೇಬಿನಿಂದ ₹100 ತೆಗೆದು ಖರ್ಚು ಮಾಡಿದೆ ಕಣೋ.

ತಿಮ್ಮ: ಅಯ್ಯೋ ದೇವರೇ! ಅಷ್ಟು ಚಿಕ್ಕ ವಿಷಯಕ್ಕೆ ನಿನ್ನನ್ನು ಅರೆಸ್ಟ್ ಮಾಡಿದ್ರಾ ?

ರಂಗ: ನಾನು ಹಣ ತೆಗೆದದ್ದು ಬೇರೆಯವರ ಜೇಬಿನಿಂದ !

***

ಟೀಚರ್: ಗುಂಡ , ಯಾವ ದ್ರವವನ್ನು ಕಾಯಿಸಿದಾಗ ಘನವಾಗುತ್ತದೆ ?

ಗುಂಡ: ಇಡ್ಲಿ ಹಿಟ್ಟು !

***

ಸೇಲ್ಸ್ ಮ್ಯಾನ್: ಸರ್ ಇದು ಇರುವೆಗೆ ಹಾಕೋ ಪೌಡರ್ ದಯವಿಟ್ಟು ತಗೋಳಿ.

ಸರ್ದಾರ್: ಬೇಡಪ್ಪ.ಇವತ್ತು ಇರುವೆಗಳಿಗೆ ಪೌಡರ್ ಹಾಕಿದ್ರೆ ನಾಳೆಯಿಂದ ಲಿಪ್ ಸ್ಟಿಕ್ ಕೇಳ್ತವೆ.

***

ಮಗ: ಅಪ್ಪಾ ನನಗೆ ದೂರದ ವಸ್ತು ಕಾಣಿಸುವುದಿಲ್ಲ ಒಂದು ಕನ್ನಡಕ ಕೊಡಿಸು.

ತಂದೆ: ತಕ್ಷಣ (ಮಗನನ್ನು ಹೊರಗೆ ಕರೆದು) ಅದು ಏನು?

ಮಗ: ಅದು ಸೂರ್ಯ.

ತಂದೆ: ಅಯ್ಯೋ ಮಗನೇ, ಇನ್ನೂ ಎಷ್ಟು ದೂರ ನೋಡಬೇಕೋ?

***

ನಿರ್ಮಾಪಕ: ನಾನು ಎಲ್ಲರ ಹೃದಯಕ್ಕೆ ಹತ್ತಿರವಾಗುವಂತಹ ಒಂದು ಸಿನಿಮಾ ಮಾಡಬೇಕೆಂದಿದ್ದೇನೆ. ಅದಕ್ಕೊಂದು ಒಳ್ಳೆಯ ಹೆಸರನ್ನು ಹೇಳಿ.

ಗುಂಡ: ಸ್ಟೆಥಸ್ಕೋಪ್

***

ಗುಂಡ: ಸರ್ , ಹತ್ತನೇ ತರಗತಿಯ ಕನ್ನಡ ಪುಸ್ತಕ ಇದೆಯೇ.

ಅಂಗಡಿಯವ: ಇಲ್ಲಪ್ಪಾ .

ಗುಂಡ: ಹಾಗಾದರೆ ಐದನೆ ತರಗತಿಯ ಎರಡು ಕನ್ನಡ ಪುಸ್ತಕ ಕೊಡಿ.

ಸಂಗ್ರಹ: ಅನೀಶ್ ಬಿ. ಕೊಪ್ಪ